(ಆ) ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ತಮಗೆ ಪತ್ರ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು : ತಾವು ಕಳುಹಿಸಿದ ಪತ್ರವನ್ನು ನೋಡಿದ್ದೇನೆ. ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಉಪ ಮುಖ್ಯಮಂತ್ರಿಗಳು ಇರಲಿಲ್ಲ. ಅವರಿಗೆ ಸಂಬಂಧಪಟ್ಟ ಹಾಗೆ ಹೇಳಿಕೆ ಕೊಡಿಸುತ್ತೇನೆಂದು ಲೋಕೋಪಯೋಗಿ ಸಚಿವರು ಹೇಳಿದ್ದರು. ವಿಷಯ ಏನೆಂದರೆ, ರೈತರಿಗೆ .....

ಅಧ್ಯಕ್ಷರು : ತಮ್ಮ ಪತ್ರಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಅನಾವಶ್ಯಕವಾಗಿ ನಾನು ಹೇಳುವುದಿಲ್ಲ. ರೈತರಿಗೆ ಇವತ್ತಿನ ದಿವಸ ವಿದ್ಯುತ್ ಒದಗಿಸತಕ್ಕ ಪರಿಸ್ಥಿತಿ ದಿನದಿನಕ್ಕೆ ಶೋಚನೀಯವಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿದ್ದೆ. ಉಪಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಉತ್ತರ ಕೊಡುತ್ತಿದ್ದರು. ಆಗ ತಾನೇ ಸಭೆಗೆ ಆ ವರದಿ ಬಂತು. ಉಪ ಮುಖ್ಯಮಂತ್ರಿಗಳು ಅಲ್ಲಿದ್ದಾರೆ, ಅವರಿಗೆ ನಾನು ತಿಳಿಸುತ್ತೇನೆ, ಇದನ್ನು ಕೊಟ್ಟಿದ್ದಾರೆ ಅಂದೆ. ಹೇಳಿಕೆ ಕೊಡಿಸುತ್ತೇನೆಂದು ನಾನು ಹೇಳಿಲ್ಲ. ನಾನು ಅವರ ಗಮನಕ್ಕೆ ತರುತ್ತೇನೆ ಅವರು ಅಲ್ಲಿದ್ದಾರೆಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ದಿನ ಕಳೆದಂತೆ ವಿದ್ಯುತ್ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಪೂರ್ಣವಾಗಿ, ಹಾಳಾಗುತ್ತಿದೆ. ನಾವು ಹಳ್ಳಿಗಳಲ್ಲಿ ಓಡಾಡುವ ಹಾಗೆ ಇಲ್ಲ. ಅದಕ್ಕೋಸ್ಕರ ಸದನದ ಸಮಿತಿ ರಚನೆಯಾಯಿತು. ಸದನದ ಸಮಿತಿ ತಾತ್ಕಾಲಿಕ ವರದಿ ಕೊಟ್ಟಿದೆ. ಆ ವರದಿಯನ್ನು ತಕ್ಷಣ ಜಾರಿಗೆ ಕೊಡಬೇಕೆಂದು ಮೊನ್ನೆ ದಿವಸ ಮನವಿ ಮಾಡಿದ್ದೇವೆ. ರೈತರ ಬಗ್ಗೆ ಕಾಳಜಿ ಇರತಕ್ಕವರು ಉಪ ಮುಖ್ಯಮಂತ್ರಿಗಳ ಕೈಯಲ್ಲಿ ಈ ಇಲಾಖೆ ಇದೆ. ರೈತರನ್ನು ಉಳಿಸತಕ್ಕ ಪ್ರಯತ್ನವನ್ನು ತಾವು ದಯವಿಟ್ಟು ಮಾಡಿ. ಪಟ್ಟಣ ಪ್ರದೇಶಕ್ಕೂ ಗ್ರಾಮಾಂತರ ಪ್ರದೇಶಕ್ಕೂ ಇರತಕ್ಕ ವ್ಯತ್ಯಾಸದಿಂದ ಗ್ರಾಮಾಂತರ ಪ್ರದೇಶಕ್ಕೆ ಏನು ಅನ್ಯಾಯ ನಡೆಯುತ್ತಿದೆ ಅದನ್ನು ಸರಿಪಡಿಸಬೇಕಾದ ಅವಶ್ಯಕತೆ ಇದೆ. ಅವರನ್ನು ನಾನು ಅನೇಕ ಸಾರಿ ಖುದ್ದಾಗಿ ಭೇಟಿಯಾಗಿದ್ದೇನೆ. ಅವರಿಗೆ ಸಹಾನುಭೂತಿ ಇದೆ, ಎಲ್ಲ ಇದೆ. ದಯವಿಟ್ಟು ಬೇಗನೆ ಕ್ರಮ ತೆಗೆದುಕೊಂಡು ಆ ವರದಿಯನ್ನು ತಕ್ಷಣ ಜಾರಿಗೆ ಕೊಡಬೇಕಾದ ಅವಶ್ಯಕತೆ ಇದೆ ಎಂದು ಕೈಜೋಡಿಸಿ ಬೇಡುತ್ತೇನೆ. ದಯವಿಟ್ಟು ಅದನ್ನು ಮಾಡಿ.

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಸದನದ ಸಮಿತಿಯವರು ಮಾಡಿರತಕ್ಕ ಶಿಫಾರಸ್ಸುಗಳು ನಮಗೆ ತಲುಪಿದೆ. ಇದೇ ದಿಕ್ಕಿನಲ್ಲಿ ನಮಗೆ ರಾಮಗೊಂಡಂ ಪವರ್ ಸ್ಟೇಷನ್‌ನಿಂದ, ಸೆಂಟ್ರಲ್ ಇನ್‌ಸ್ಟಲೇಷನ್‌ನಿಂದ ಬರತಕ್ಕ ವಿದ್ಯುಚ್ಛಕ್ತಿ ಮೌಲ್ಯ ಬಹಳ ಕಡಿಮೆ ಇರತಕ್ಕದ್ದನ್ನು ಆಂಧ್ರ ಸರ್ಕಾರದ ಜೊತೆಯಲ್ಲಿ ಚರ್ಚೆ